
ಕಥೆ

# ಅವರವರ ಭಾವಕ್ಕೆ...

■ ವಸುಮತಿ ಉಡುಪ
ಕಲೆ: ರಘುಪತಿ ಶೃಂಗೇರಿ



ಇವೆರಡೂ ಒಟ್ಟೊಟ್ಟಿಗೆ ನಡೆದ ಘಟನೆಗಳೇನಲ್ಲ, ಎರಡೂ ಪ್ರತ್ಯೇಕ ಘಟನೆಗಳು. ರಾಘವನ ಪರಿಚಿತ ವಲಯದಲ್ಲಿ, ಪರಿಚಿತ ಅನ್ನುವುದಕ್ಕಿಂತ ಆಪ್ತವಲಯದಲ್ಲಿ ನಡೆದಂಥವುಗಳಾದ್ದರಿಂದ ಈ ಘಟನೆಗಳು ಅವನ ಮನಸ್ಸನ್ನು ಕೆಣಕಿ ಒಂದು ರೀತಿಯ ವಿಷಣ್ಣಭಾವವನ್ನು ಉಂಟುಮಾಡಿದ್ದು ಹೌದು. ಘಟನೆ ಯಾವುದೇ ಇರಲಿ, ಮನುಷ್ಯಮಾತ್ರರು ಅದನ್ನು ಅನಿವಾರ್ಯವಾಗಿ ಸ್ವೀಕರಿಸುವಾಗಿನ, ಒಪ್ಪಿಕೊಳ್ಳುವಾಗಿನ ಮನೋಧರ್ಮ ಹೇಗೆ ವಿಭಿನ್ನವಾಗಿರುತ್ತದೆ ಎಂಬುದನ್ನು ನೆನೆದರೆ ಅವನಿಗೆ ಅಚ್ಚರಿಯಾಗುತ್ತದೆ. ಹಾಗಿದ್ದರೆ ಬದುಕಿಗೊಂದು ನಂಬಿಕೆ ಇರಬೇಕೇ? ಇಲ್ಲದಿದ್ದಲ್ಲಿ ಮನುಷ್ಯ ಆಂತರಿಕವಾಗಿ ಕುಸಿದು ಹೋಗಿಬಿಡುತ್ತಾನೆಯೇ? ರಾಘವ ಒಂದು ರೀತಿಯ ತ್ರಿಶಂಕು ಮನೋಸ್ಥಿತಿಯವನು.

ಡಿ.ವಿ.ಜಿ.ಯವರು ಮಂಕುತಿಮ್ಮನ ಕಗ್ಗದಲ್ಲಿ ಹೇಳಿದ ಹಾಗೆ–

ನಂಬದಿರ್ದನು ತಂದೆ, ನಂಬಿದನು ಪ್ರಹ್ಲಾದ,
ನಂಬಿಯೂ ನಂಬದಿರುವಿಬ್ಬಂದಿ ನೀನು
ಕಂಬದಲೊ, ಬಿಂಬದಲೊ ಮೋಕ್ಷವವನಿಂಗಾಯ್ತು,
ಸಿಂಬಳದ ನೊಣ ನೀನು– ಮಂಕುತಿಮ್ಮ

ಎನ್ನುವಂಥವನು. ಸೊಗಸಾದ ಮನೆ ಕಟ್ಟಿ ಗೃಹಪ್ರವೇಶ ಮಾಡುವಾಗಿನ ಸಂದರ್ಭದಲ್ಲಿ ಅವನ ಅಪ್ಪ ಹೇಳಿದ್ದರು, 'ಒಂದು ಹೋಮ, ಒಂದು ಪೂಜೆ ಅಂತ ಏನಾದ್ರೂ ಮಾಡಿಸ್ಬೇಕು ಕಣೋ. ಜಾಗ ಒಳ್ಳೇದೂ ಇರುತ್ತೆ, ಕೆಟ್ಟಿದ್ದೂ ಇರುತ್ತೆ. ದುಷ್ಟಶಕ್ತಿಗಳು ಕಾಡಿಸದೇ ಇದ್ದ ಹಾಗೆ...' ಅಪ್ಪನ ಮಾತನ್ನು ಅರ್ಧಕ್ಕೆ ತುಂಡುಗಡಿದಿದ್ದ ರಾಘವ.

'ನಿಂಗೊತ್ತಲ್ಲ ಅಪ್ಪಾ, ಅಂಥದ್ದೆಲ್ಲಾ ನಾವು ನಂಬಲ್ಲ'.

'ನಂಬ್ತೀರೋ, ಬಿಡ್ತೀರೋ, ಹತ್ತು ಜನ ನಡೆದ ಹಾದೀಲಿ ನಡೆಯೋದು ಬುದ್ಧಿವಂತಿಕೆ, ಕ್ಷೇಮ'

'ನಾವೇ ಹೊಸ ದಾರಿ ಹುಟ್ಟು ಹಾಕಿ ಮೇಲ್ಪಂಕ್ತಿ ಆಗ್ಬಾರ್ದಾ ಅಪ್ಪ? ನಮ್ಮಂತೋರು ತುಂಬಾ ಜನ ಇರ್ತಾರೆ...'

'ಕೋಟಿಗಟ್ಲೆ ಸುರಿದು ಜಾಗ ಖರೀದಿ ಮಾಡಿ ಮನೆ ಕಟ್ಟಿಸಿರ್ತೀರಿ. ಶಾಸ್ತ್ರೋಕ್ತ ಗೃಹಪ್ರವೇಶಕ್ಕೆ ಆಗೋ ಖರ್ಚು ದೊಡ್ಡದು ಅನ್ನಿಸುತ್ತಾ?'

'ದುಡ್ಡಿನ ವಿಷಯ ಅಲ್ಲವೇ ಅಲ್ಲ. ವಿದ್ಯಾವಂತರಾಗಿ ನಾವೇ ಮೂಢನಂಬಿಕೆಗೆ ಮಣೆ ಹಾಕ್ಬಾರ್ದು ಅಂತ...'

ಅಪ್ಪ ಹೇಳಿದ ಹಾಗೆ ಒಂದು ಪೂಜೆ ಮಾಡಿಸಲು ಅವನು ಚೌಕಾಶಿ ಮಾಡಿದ್ದಕ್ಕೆ ಮುಖ್ಯ ಕಾರಣ ಅವನ ಹೆಂಡತಿ ಮನೋರಮಾ. ಅವಳು ಒಂಥರಾ ಬಂಡಾಯ ಮನೋಧರ್ಮದವಳು. ಚೆನ್ನಾಗಿ ಓದಿಕೊಂಡಿದ್ದಾಳೆ. ಕಾಲೇಜಿನಲ್ಲಿ ಉಪನ್ಯಾಸಕಿ ಆಗಿದ್ದಾಳೆ. ಹಬ್ಬ ಹರಿದಿನ, ಪೂಜೆ ಪುನಸ್ಕಾರ ಅಂದರೆ ಅವಳು ಮಾರು ದೂರ. ಮಗ ಅಷ್ಟೆಲ್ಲಾ ದುಡ್ಡು ಖರ್ಚು ಮಾಡಿ ಮನೆ ಕಟ್ಟಿಸುವಾಗ 'ದೇವರ ಕೋಣೆ' ಅನ್ನುವುದೊಂದಿರಲಿ ಎಂದು ಅಪ್ಪನಿಗೆ ಕುತ್ತಿಗೆಯವರೆಗೆ ಆಸೆ ಇತ್ತು. ಬಾಯ್ಬಿಟ್ಟು ಹೇಳಿಯೂ ಇದ್ದರು.

'ಅಪರೂಪಕ್ಕೆ ನಾವು ನಿಮ್ಮನೆಗೆ ಬಂದರೆ ದೇವರಿಗೆ ನಾಲ್ಕು ಹೂವು ಏರಿಸುವುದಕ್ಕೆ, ನೆಮ್ಮದಿಯಿಂದ ಕೂತು ಸಂಧ್ಯಾವಂದನೆ ಮಾಡಲಿಕ್ಕೆ ಒಂದು ಪ್ರತ್ಯೇಕ ಜಾಗ ಬೇಡ್ವೇನೋ? ಅತಿಯಾಯ್ತು ನಿಮ್ದು...'

ಇವನು ಹೆಂಡತಿಯ ಕಿವಿಯಲ್ಲಿ ಈ ಮಾತು ಉಚ್ಚರಿಸಿದ್ದ. 'ನಾವು ಮಾಡೋ ಕೆಲಸಾನೇ ಪೂಜೆ. ಅದರಲ್ಲಿ ಶ್ರದ್ಧೆ ಇದ್ರೆ ಬೇಕಾದಷ್ಟಾಯ್ತು' ಅಂದಿದ್ದಳು ಮನೋರಮಾ. ಅರಿಶಿನ, ಕುಂಕುಮಕ್ಕೆ ಯಾರಾದರೂ ಕರೆದರೆ ಅವಳು ನೇರವಾಗೇ ನಿರಾಕರಿಸುವ ಪೈಕಿ. 'ಅಂಥಾದ್ದಕ್ಕೆಲ್ಲಾ ನನ್ನ ಕರೀಬೇಡಿ' ಎನ್ನಲು ಯಾವ ಮುಲಾಜೂ ಇಲ್ಲದವಳು. 'ನನಗೆ ರಂಗೋಲಿ ಹಾಕಲು ಬರುವುದಿಲ್ಲ' ಎಂದು ಮದುವೆಯಾದ ಹೊಸದರಲ್ಲಿ ಅತ್ತೆಯ ಎದುರು ಹೇಳಿದವಳು. 'ಇದ್ಯಾವ ಜಾತಿ ಹೆಣ್ಣು?' ಎಂದು ಅಮ್ಮ ಮೂಗಿನ ಮೇಲೆ ಬೆರಳಿಟ್ಟುಕೊಂಡಿರುತ್ತಾಳೆ